# ಅಮ್ಮನ ಪಾತ್ರ ಬಲು ದುಬಾರಿ



## ರಾಜುವೇಣಿ (ಪ್ರೇಮಾಗೌಡ) ಝೀ ಕನ್ನಡದ 'ಅಮೃತಧಾರೆ'ಯ ಕಲ್ಯಾಣಿ

◆ **ನಿಮ್ಮ ಹೆಸರಿನ ಸ್ವಾರಸ್ಯ ಏನು?**

ನನ್ನ ಮೂಲ ಹೆಸರು ರಾಜುವೇಣಿ. ಈ ಕ್ಷೇತ್ರಕ್ಕೆ ಬಂದ ಮೇಲೆ ಪ್ರೇಮಾ ಎಂಬ ನಾಮಬಲ ನನಗೆ ಒಲಿಯಿತು. ಇಂಡಸ್ಟ್ರಿಯಲ್ಲಿ ಪ್ರೇಮಾ ಎನ್ನುವವರು ಹೆಚ್ಚುಮಂದಿ ಇದ್ದಾರೆ. ನೀವು ಹೇಗೂ ಗೌಡರನ್ನು ಮದುವೆ ಆಗಿದ್ದೀರಿ, ನಿಮ್ಮ ಹೆಸರನ್ನೂ ಪ್ರೇಮಾಗೌಡ ಮಾಡಿಕೊಳ್ಳಿ ಎಂದು ಮ್ಯಾನೇಜರ್ ಒಬ್ಬರು ನನ್ನ ಹೆಸರನ್ನು ಬದಲಿಸಿದರು. ಸ್ವಲ್ಪ ದಿನ ಪ್ಲೇನ್ ಪ್ರೇಮಾ ಆಗಿದ್ದ ನಾನು ಬದಲಾದೆ. ರಾಜುವೇಣಿ ಹೆಸರೇ ನನಗೆ ಇಷ್ಟ.

◆ **ನಿಮ್ಮ ಪಾತ್ರದ ಬೆಳವಣಿಗೆ ಹೇಗಿದೆ?**

ವಿಸ್ತಾರವಾದ ಪಾತ್ರದ ನಿರೀಕ್ಷೆ ನನಗೂ ಇದೆ. ಸದ್ಯ ಸಿಕ್ಕ ಪಾತ್ರಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದೇನೆ. ನಿರ್ದಿಷ್ಟವಾಗಿ ಹೀಗೇ ಇರಬೇಕು ಎಂದು ನಾನು ಅಂದುಕೊಂಡಿಲ್ಲ. ಸಿಕ್ಕ ಒಳ್ಳೆಯ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದೇನೆ. ಭೂಮಿಕಾ ಮದುವೆ ಸಂದರ್ಭದಲ್ಲಿ ಮುಖ್ಯ ಅನ್ನಿಸುತ್ತದೆ. ಅವಳ ಮದುವೆ ಮಾಡಿಸಿದ್ದೇವೆ. ಸದ್ಯ ನಾವು ಊರಿಗೆ ಹೋಗಬಹುದು. ಹೋದರೆ ನಂತರ ಮತ್ತೆ ನನ್ನ ಪಾತ್ರ ಯಾವಾಗ ಪ್ರವೇಶ ಮಾಡುತ್ತೋ ಗೊತ್ತಿಲ್ಲ. ಕಥೆಯ ಹರವಿನ ಮೇಲೆ ಅದು ನಿಂತಿರುತ್ತದೆ. ಹೀಗೇ ಎಂದು ಈಗಲೇ ನಾನು ಹೇಳಲು ಆಗುವುದಿಲ್ಲ. 'ಜೊತೆ ಜೊತೆಯಲಿ' ಮೂರು ವರ್ಷ ಕೆಲಸ ಮಾಡಿದ್ದೆ.

◆ **ನಟನೆಯ ಆರಂಭ ಆಗಿದ್ದು ಹೇಗೆ?**

ನಮ್ಮ ತಂದೆ ಚಂದ್ರಾನಾಯ್ಕ್, ಅಮ್ಮ ಸೀತಮ್ಮ, ನಮ್ಮದು ಭದ್ರಾವತಿ ತಾಲ್ಲೂಕಿನ ಲಕ್ಷ್ಮಿಸಾಗರ. ನಮ್ಮ ಅಣ್ಣ ಬೆಂಗಳೂರಿನಲ್ಲಿ ಕೆಲಸದಲ್ಲಿ ಇದ್ದಿದ್ದರಿಂದ ಡಿಗ್ರಿ ಓದಲು ನಾನು ಬೆಂಗಳೂರಿಗೆ ಬಂದೆ. ನಂತರ ಒಂದು ಕಂಪನಿಯಲ್ಲಿ ಅಕೌಂಟ್ ವಿಭಾಗದಲ್ಲಿ ಕೆಲಸಕ್ಕೆ ಸೇರಿದೆ. ಹತ್ತು ವರ್ಷ ಕೆಲಸ ಮಾಡಿದೆ. ನಟನೆ ಮಾಡಿ ಅನುಭವ ಇರಲಿಲ್ಲ. ಆ ಬಗ್ಗೆ ಪ್ರೀತಿ ಟೀವಿ ನೋಡುತ್ತಾ ಬೆಳೆದಿತ್ತು. ಏಳೆಂಟು ವರ್ಷಗಳ ಹಿಂದೆ ಈ ಟೀವಿಯಲ್ಲಿ 'ರೋಬೊ ಫ್ಯಾಮಿಲಿ' ಎಂಬ ಕಾರ್ಯಕ್ರಮ ಬರ್ತಾ ಇತ್ತು. ಅದನ್ನು ಮಾಸ್ಟರ್ ಆನಂದ್ ನಡೆಸಿಕೊಡುತ್ತಿದ್ದರು. ಅವರನ್ನು ಒಮ್ಮೆ ಭೇಟಿಯಾಗಿ ಫೋಟೊ ಕೊಟ್ಟು ನನಗೆ ಭಾಗವಹಿಸುವ ಆಸಕ್ತಿ ಇದೆ ಎಂದು ಹೇಳಿ ಬಂದಿದ್ದೆ. ಒಂದು ವಾರದ ನಂತರ ಕರೆಬಂತು. ಆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕ್ಯಾಮೆರಾ ಎದುರಿಸಿದೆ. ನಂತರ ಒಬ್ಬರಿಂದ ಒಬ್ಬರು ನಂಬರ್ ಪಡೆದು ನನಗೆ ಅವಕಾಶಗಳನ್ನು ಕೊಟ್ಟರು. ಅದಕ್ಕಾಗಿ ನಾನು ವಿಶೇಷ ಯತ್ನವನ್ನು ಮಾಡಲಿಲ್ಲ. ಇದುವರೆಗೆ ಸುಮಾರು 25 ಸಿನಿಮಾ, 25 ಧಾರಾವಾಹಿಗಳಲ್ಲಿ ನಟಿಸಿದ್ದೇನೆ. ಬಹುತೇಕ ಎಲ್ಲ ಒಳ್ಳೆಯ ಪಾತ್ರಗಳನ್ನು ಮಾಡಿದ್ದೇನೆ. ದೀರ್ಘಾವಧಿಯ ಪಾತ್ರಗಳು ಸಿಕ್ಕಿಲ್ಲ. ಆ ನಿರೀಕ್ಷೆ ಇದ್ದೇ ಇದೆ. ಈಗ ಒಂದು ಮಟ್ಟಿಗೆ ಅಭಿನಯ ಕೌಶಲ್ಯವೂ ಸಿಕ್ಕಿದೆ.

◆ **ನೌಕರಿಯಿಂದ ನಟಿಯಾದ ನಂತರ ಜೀವನಶೈಲಿಯಲ್ಲಿ ಆಗಿರುವ ಪಲ್ಲಟವೇನು?**

ಹತ್ತು ವರ್ಷ ಕೆಲಸ ಮಾಡಿದ್ದೆ. ಕೆಲಸದಲ್ಲಿ ಇದ್ದಾಗಲೇ 'ರೋಬೊ ಫ್ಯಾಮಿಲಿ' ಕಾರ್ಯಕ್ರಮ ರಜೆ ತೆಗೆದುಕೊಂಡು ಮಾಡುತ್ತಿದ್ದೆ. ವಾರದಲ್ಲಿ ಒಂದು ದಿನ ಮಾತ್ರ ಕೆಲಸ ಇರ್ತಾ ಇತ್ತು. 'ಕಲರ್ಸ್ ರಾಧಾರಮಣ'ದಲ್ಲಿ ಪಾತ್ರ ಸಿಕ್ಕಾಗ ಕೆಲಸಕ್ಕೆ ರಾಜೀನಾಮೆ ನೀಡಿದೆ. ಐದು ವರ್ಷಗಳಿಂದ ಪೂರ್ಣಾವಧಿ ನಟನೆಗೆ ಮೀಸಲಿಟ್ಟಿದ್ದೇನೆ. ನಟನೆಗೆ ನಿರಂತರವಾಗಿ ಕೆಲಸ ಇರುವುದಿಲ್ಲ. ಮೊದಲು ಬೆಳಿಗ್ಗೆ ರೆಡಿಯಾಗಿ ಆಫೀಸಿಗೆ ಹೋಗಿ ಕೆಲಸ ಮುಗಿಸಿಕೊಂಡು ಸಂಜೆ ಮರಳಿ ಬರ್ತಿದ್ದೆ. ಅದಕ್ಕೆ ನನ್ನ ಜೀವನಶೈಲಿ ಹೊಂದಿಕೆಯಾಗಿತ್ತು. ಚಿತ್ರಲೋಕಕ್ಕೆ ಬಂದ ಮೇಲೆ, ಶೂಟಿಂಗ್ ಅಂದರೆ ಬೆಳಿಗ್ಗೆ 5 ಅಥವಾ 5.30ರ ಹೊತ್ತಿಗೆ ಕಾರು ಬರ್ತಿತ್ತು. ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಮನೆಗೆ ಬಿಡ್ತಾ ಇದ್ರು. ಸರಿಯಾಗಿ ನಿದ್ದೆ ಇರ್ತಾ ಇರಲಿಲ್ಲ. ಊಟವೂ ಸರಿ ಹೋಗುತ್ತಿರಲಿಲ್ಲ. ಮನೆಗೂ ಸಮಯ ಕೊಡಲು ಆಗುತ್ತಿರಲಿಲ್ಲ. ಎರಡು ಮೂರು ದಿನ ಕೆಲಸ ಇಲ್ಲದೆ ಹೋದರೆ ಸಿಕ್ಕಾಪಟ್ಟೆ ಬೋರ್ ಅನ್ನಿಸುತ್ತಿತ್ತು. ಏನೂ ಮಾಡುತ್ತಿಲ್ಲ. ಸಮಯ ವೇಸ್ಟ್ ಆಗುತ್ತಿದೆ ಎಂದು ಅನ್ನಿಸುತ್ತಿತ್ತು.

◆ **ಮುಂದಿನ ಕನಸಿನ ಪಾತ್ರ ಯಾವುದು?**

ನಾಯಕಿ/ ನಾಯಕನ ಅಮ್ಮನ ಪಾತ್ರ ಮಾಡುತ್ತಿದ್ದೇನೆ. ಚಿಕ್ಕ ವಯಸ್ಸಿಗೆ ಅಮ್ಮ ಆಗಿದ್ದೇನೆ. ಹೆಚ್ಚೆಂದರೆ ನಾಲ್ಕು ಐದು ವರ್ಷದ ಅಂತರ ಇರುತ್ತದೆ. ಹ್ಯಾಟ್ರಿಕ್ ಹೀರೊ ಶಿವಣ್ಣ, ದರ್ಶನ್, ಸುದೀಪ್ ಅವರ ಜೊತೆ ಇನ್ನೂ ನಟಿಸಿಲ್ಲ. ಮುಂದೆ ಅವರ ಜೊತೆ ನಟಿಸಬೇಕು. ದೊಡ್ಡ ವಯಸ್ಸಿನ ಪಾತ್ರಕ್ಕೆ ಕಷ್ಟ ಆಗುವುದು ಏನೆಂದರೆ, ಆ ಮಟ್ಟಿನ ಅನುಭವ ನನಗೆ ಇಲ್ಲ. ಆಗೆಲ್ಲ ನನಗೆ ಕಷ್ಟ ಆಗುತ್ತಿತ್ತು. ಅಮ್ಮ–ಅತ್ತೆಯನ್ನು ನೆನಪಿಸಿಕೊಂಡು ಅವರು ಹೇಗೆ ಕೋಪ ಮಾಡಿಕೊಳ್ಳುತ್ತಾರೆ, ಆಗ ಅವರ ದೇಹಭಾಷೆ ಹೇಗಿರುತ್ತದೆ ಎನ್ನುವುದನ್ನು ಕಲ್ಪನೆ ಮಾಡಿಕೊಂಡು ಆ ಭಾವನೆಗಳನ್ನು ಹೊರಹೊಮ್ಮಿಸಲು ಪ್ರಯತ್ನ ಮಾಡುತ್ತೇನೆ.

■ **ರಾಘವೇಂದ್ರ ಕೆ.**